ಬೆಂಗಳೂರು ಜೀವನಭೀಮಾ ನಗರದಲ್ಲಿರುವ ಕರ್ನಾಟಕ ವಿದ್ಯುತ್ ಮಂಡಳಿಯ ಸಂಚಾರಿ ಕ್ಯಾಷ್ ಕೌಂಟರ್ ಬಗ್ಗೆ

೩೦೬. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).— ಮಾನ್ಯ ಬಾರಿ ಪಾಗೂ ಮಧ್ಯಪು ಕೈಗಾರಿಕೆಗಳ ಪಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಜೀವನ ಭೀಮನಗರದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಶಾಖೆಗೆ ಹಣ ಪಾವತಿ ಮಾಡುವ ಪ್ರದೇಶಗಳು ಯಾವುವು ?

ಆ) ವಿದ್ಯುತ್ ಬಿಲ್ಲುಗಳನ್ನು ಪಾವತಿ ಮಾಡುವ ಈ ಕೌಂಟರ್‌ನಲ್ಲಿ ಹೆಚ್ಚು ಒತ್ತಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಹಣಪಾವತಿ ಮಾಡುವ ಸಂಚಾರಿ ಕೌಂಟರ್ ವ್ಯವಸ್ಥೆಯನ್ನು ಈ ಪ್ರದೇಶಕ್ಕೆ ವಿಸ್ತರಿಸಲು ಕ್ರಮ ಜರುಗಿಸುವುದೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಹೆಚ್.ಎ.ಎಲ್.ನ'ಮಸ್'ನಲ್ಲಿನ ಸ್ಥಾಪಿಸಿರುವ ಹಣ ಪಾವತಿಮಾಡುವ ಕೌಂಟರ್‌ನಲ್ಲಿ ಮಾರುಗೇಶಪಾಳ್ಯ, ಮಾರತ್‌ಹಳ್ಳಿ, ಮಲ್ಲೇಶಪಾಳ್ಯ, ಕಳ್ಳಗಟ್ಟ, ಕೋನೇನ ಅಗ್ರಹಾರ, ಜೀವನಭೀಮ ನಗರ, ಹೆಚ್.ಎ.ಎಲ್. ಸಿನೆ ಹಂತ, ವಿಭೂತಿಪುರ, ಕೋಡಿಹಳ್ಳಿ, ರೆಡ್ಡಿಪಾಳ್ಯ, ಕೆ.ಆರ್. ಗಾರ್ಡನ್, ಬೇಲೂರು ನಾಗಸಂದ್ರ, ಬಸವನಗರ, ರಮೇಶನಗರ ಮುಂತಾದ ಭಾಗಗಳ ಗ್ರಾಹಕರಿಂದ ಕಂದಾಯ ಸ್ವೀಕರಿಸುತ್ತದೆ.

ಆ) ಸಾಮಾನ್ಯವಾಗಿ ತಿಂಗಳ ಮೊದಲನೇ ವಾರದಲ್ಲಿ ಹೆಚ್ಚು ಒತ್ತಡವಿರುತ್ತದೆ. ಇನ್ನುಳಿದ ದಿನಗಳಲ್ಲಿ ಸಾಮಾನ್ಯ ಸ್ಥಿತಿಯಲ್ಲಿರುತ್ತದೆ.

ಇ) ತಿಂಗಳ ಮೊದಲನೇ ವಾರದಲ್ಲಿಯೂ ಹಾಗೂ ಇನ್ನುಳಿದ ದಿನಗಳಲ್ಲಿ ಹೆಚ್ಚು ಒತ್ತಡವಿರುವಾಗ ಮತ್ತೊಂದು ಹಣ ಪಾವತಿ ಮಾಡುವ ಕೌಂಟರನ್ನು ತೆಗೆಯಲಾಗುತ್ತದೆ ?

ಮಾರತ್‌ಹಳ್ಳಿಯಲ್ಲಿರುವ ಕೆನರಾ ಬ್ಯಾಂಕಿನಲ್ಲಿಯೂ ಸಹ ಹಣ ಪಾವತಿ ಮಾಡಬಹುದು. ಈ ರೀತಿಯ ವ್ಯವಸ್ಥೆಯಿಂದ ವಿದ್ಯುಚ್ಛಕ್ತಿ ಬಿಲ್ಲುಗಳ ಹಣ ಪಾವತಿ ಮಾಡುವಲ್ಲಿ ತೊಂದರೆಯಾಗುವುದಿಲ್ಲ. ಈಗಿರುವ ವ್ಯವಸ್ಥೆಯು ಸಮರ್ಪಕವಾಗಿರುವುದರಿಂದ ಸಂಚಾರಿ ಕೌಂಟರ್‌ನ್ನು ವಿಸ್ತರಿಸುವ ಅವಶ್ಯಕತೆ ಇರುವುದಿಲ್ಲ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.— ಮಾನ್ಯ ಅಧ್ಯಕ್ಷರೇ, ಜೀವನಭೀಮನಗರದಲ್ಲಿ ಸುಮಾರು ಮೂರು ಸಾವಿರ ಮನೆಗಳು ಇದ್ದು ಎಲ್ಲಾ ಮನೆಗಳಿಗೂ ಏಕ ಕಾಲದಲ್ಲಿ ವಿದ್ಯುತ್ ಬಿಲ್ ಬರುತ್ತದೆ. ಈ ಏರಿಯಾದಲ್ಲಿ ವಿಶೇಷವಾಗಿ ಸರ್ಕಾರಿ ನೌಕರರೇ ಇದ್ದು ಅವರು ೨-೩ ಗಂಟೆ ಕಾಲ ಸರತಿ ಸಾಲಿನಲ್ಲಿ ನಿಂತು ಹಣ ಪಾವತಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇನ್ನೊಂದು ಕೌಂಟರನ್ನು ಹೆಚ್ಚು ಮಾಡಿ ಎಂದು ಅವರು ಒತ್ತಡವನ್ನು ತರುತ್ತಿದ್ದಾರೆ. ಈಗಾಗಲೇ ಇಂದಿರಾನಗರದ ಡಬಲ್‌ರೋಡ್ ವರೆಗೆ ಮೊಬೈಲ್ ಕ್ಯಾಷ್ ಕೌಂಟರ್ ಬರುತ್ತಿದೆ. ಅದನ್ನು ಜೀವನಭೀಮಾನಗರದವರೆಗೂ ವಿಸ್ತರಿಸಬೇಕೆಂದು ಹೇಳುತ್ತೇನೆ. ಇದರಿಂದ ಇಲಾಖೆಯವರಿಗೇನೂ ಕಷ್ಟ ಆಗುವುದಿಲ್ಲ, ಮಾನ್ಯ ಮಂತ್ರಿಗಳಿಂದ ನನ್ನ ಪ್ರಶ್ನೆಗೆ ಸಂಪೂರ್ಣವಾದ ಉತ್ತರ ಬಂದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.— ನಮಗೆ ಯಾವುದೇ ರೀತಿಯ ಹೆಚ್ಚಿನ ಹಣ ವಿಚ್ಚುಯಿಲ್ಲದೆ ಈ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಾರೆ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.— ತಿಂಗಳ ಮೊದಲನೆಯ ವಾರದಲ್ಲಿ ಒತ್ತಡ ಇರುತ್ತದೆ ನಂತರ ಕಡಿಮೆಯಾಗುತ್ತದೆ. ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಪರಿಸ್ಥಿತಿಯನ್ನು ನೋಡಿದರೆ

ಗೊತ್ತಾಗುತ್ತದೆ. ಮೊಬೈಲ್‌ಕ್ಯಾಷ್ ಕೌಂಟರ್ ಅನ್ನು ವಿಸ್ತರಿಸಿದರೆ ಬಹಳ ಒಳ್ಳೆಯದೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.— ಅದನ್ನು ಪರಿಶೀಲನೆ ಮಾಡುತ್ತೇನೆ.

ಬೇಡ್ತಿ ಯೋಜನೆ ಕಾರ್ಯಗತಗೊಳಿಸಿರುವ ಬಗ್ಗೆ ಪರಿಶೀಲನಾ ಸಮಿತಿ

೩೧೯೩. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).— ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯ ಬೇಡ್ತಿ ಜಲವಿದ್ಯುತ್ ಯೋಜನೆ ಕೆಲಸವನ್ನು ಎಂದು ನಿಲ್ಲಿಸಲಾಯಿತು ?

ಆ) ಯಾವ ದಿನಾಂಕದಂದು ಈ ಯೋಜನೆಯ ಬಗ್ಗೆ ಅಭ್ಯಸಿಸಲು ಕಮಿಟಿಯೊಂದನ್ನು ನಿಯುಮಿಸಲಾಯಿತು ಮತ್ತು ಕಮಿಟಿಯ ಸದಸ್ಯರು ಯಾರು ಯಾರು ?

ಇ) ಈ ಕಮಿಟಿ ತನ್ನ ವರದಿಯನ್ನು ಸರ್ಕಾರಕ್ಕೆ ಯಾವಾಗ ಒಪ್ಪಿಸಿದೆ ?

ಈ) ಈ ಕಮಿಟಿಯು ವರದಿಯನ್ನು ಯಾವಾಗ ಸದನದ ಮುಂದೆ ಮಂಡಿಸಲಾಗುವುದು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ರಾಜ್ಯ ಸರ್ಕಾರವು ತನ್ನ ಪತ್ರ ನಂ. ಪಿಡಬ್ಲ್ಯೂಡಿ ೩೪೪ ಪಿಪಿಸಿ ೮೧ ದಿನಾಂಕ ೫–೧೨–೭೯ ರಲ್ಲಿ ತಿಳಿಸಿದಂತೆ ಈ ಯೋಜನೆಯ ಕೆಲಸಗಳನ್ನು ಡಿಸೆಂಬರ್ ೧೯೭೯ ರಲ್ಲಿ ನಿಲ್ಲಿಸಲಾಯಿತು.

ಆ) ಸರ್ಕಾರವು ತನ್ನ ಪತ್ರ ನಂ. ಪಿಡಬ್ಲ್ಯೂಡಿ ೯ ಪಿಪಿಸಿ ೮೧ ದಿನಾಂಕ ೧೩–೧–೮೧ ಮತ್ತು ೨೨–೩–೧೯೮೧ರಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿತ್ತು.

ಶ್ರೀಯುತರಾದ		
೧) ಹೆಚ್. ವಿ. ನಾರಾಯಣರಾವ್	...	ಅಧ್ಯಕ್ಷರು
೨) ಜಿ. ಕರ್. ಮಾವಿನಕುರ್ವೆ	...	ಸದಸ್ಯ
೩) ಬಿ. ಸಿ. ಅಂಗಡಿ	...	ಸದಸ್ಯ
೪) ಕೆ. ಸಿ. ರೆಡ್ಡಿ	...	ಸದಸ್ಯ
೫) ಎಂ. ಎ. ಪಾರ್ಥಸಾರಥಿ	...	ಸದಸ್ಯ
೬) ಸಿಸಿಲ್. ಜಿ. ಸಾಲ್ಡಾನ	...	ಸದಸ್ಯ

(ತಾ: ೨–೩–೧೯೮೧)

ಇ) ಈ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ದಿನಾಂಕ ೩–೪–೧೯೮೬ ರಂದು ಸಲ್ಲಿಸಿತು.

ಈ) ಕಾರವಾರ ಜಿಲ್ಲೆ ಮತ್ತು ಅಕ್ಕಪಕ್ಕ ಪ್ರದೇಶದ ಜೀವಿ ಪರಿಸ್ಥಿತಿ ವ್ಯವಸ್ಥೆಯನ್ನು (ಎಕೊಸಿಸ್ಟಮ್) ಅಭ್ಯಸಿಸಬೇಕೆಂದು ಸರ್ಕಾರವು ನಿರ್ಧರಿಸಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ವಿದ್ಯುತ್ ನಿಗಮವನ್ನು ದಿನಾಂಕ ೧–೭–೧೯೮೬ ರಂದು ಕೋರಲಾಗಿದೆ.

ಶ್ರೀ ಆರ್. ಎನ್. ನಾಯಕ್.— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರದಲ್ಲಿ ಎರಡು ವರ್ಷಗಳ ಹಿಂದೆ ಒಂದು ಎಕ್ಸ್‌ಪರ್ಟ್ಸ್ ಕಮಿಟಿಯನ್ನು ಮಾಡಲಾಗಿತ್ತು ಎಂದು ಹೇಳಿದ್ದಾರೆ. ಆ ಎಕ್ಸ್‌ಪರ್ಟ್ಸ್ ಕಮಿಟಿ ರಿಪೋರ್ಟನ್ನು ಪಡೆದುಕೊಂಡಿದ್ದಾರೊ ಏನೋ ಗೊತ್ತಿಲ್ಲ ನಾನು ಈ ವಿಚಾರವನ್ನ ಬಹಳ ಸಲ ಕೇಳಿದ್ದೇನೆ. ಬೇಡ್ತಿ ಯೋಜನೆಯ ಬಗ್ಗೆ ಎಕ್ಸ್‌ಪರ್ಟ್ಸ್